O.S. ನಂಬರಃ 68/2017

ಡಿ. ಡಬ್ಲ್ಯೂಃ 1

ದಿಃ 12-07-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ವಾದಿ ಪರ ಶ್ರೀ ಎಂ.ಎ.ಆರ್. ವಕೀಲರಿಂದಃ

ನಿಪಿ-4 ರಲ್ಲಿ ಅಂಜುಮನ್ ಸಂಸ್ಥೆಯ ವಿವಾದ ಬಗೆಹರಿಸಲು ಮನವಿ ಎಂದು ಪ್ರಕಟಗೊಂಡ ಪತ್ರಿಕಾ ಪ್ರಕಟಣೆ ಯಾವ ವಿಷಯಕ್ಕಾಗಿತ್ತು ಎಂದರೆ ಸಾಕ್ಷಿ ಅಂಜುಮನ್ ಸಂಸ್ಥೆಗೆ ಆ ಸಮಯದಲ್ಲಿ ಆಡಳಿತಾಧಿಕಾರಿ ಹಿಡಿತದಲ್ಲಿದ್ದು, ಅಂದಾಜು 2-ವರ್ಷವಾದರೂ ಚುನಾವಣೆ ನಡೆಸದ ಕಾರಣ ಸದರಿ ಪತ್ರಿಕಾ ಪ್ರಕಟಣೆ ಆಗಿತ್ತು ಎಂದು ಹೇಳುತ್ತಾರೆ. ಚುನಾವಣೆಯ ಮೂಲಕ ಆಯ್ಕೆಯಾದ ಅಭ್ಯರ್ಥಿಗಳ ಅವಧಿ ಮುಗಿದ ನಂತರ ಮುಂದಿನ ಚುನಾವಣೆಯವರೆಗೂ ವಕ್ಫ ಕಾಯ್ದೆ ಪ್ರಕಾರ ಆಡಳಿತಾಧಿಕಾರಿ ನೇಮಕವಾಗಿರುತ್ತಾರೆ. ಆಡಳಿತಾಧಿಕಾರಿ ನೇಮಕವಾಗುವ ಪೂರ್ವದ ಚುನಾಯಿತ ಅಭ್ಯರ್ಥಿಗಳು ಅಂಜುಮನ್ ಸಂಸ್ಥೆಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರದಲ್ಲಿ ಅಪ್ರತಪ್ರ ಮಾಡಿರುವುದರಿಂದ ರಾಜ್ಯ ವಕ್ಫ ಮಂಡಳಿಯವರು ಹಿಂದಿನ ಕಮಿಟಿಯನ್ನು ತೆಗೆದು ಹಾಕಿದ್ದರು ಎಂದರೆ ಮಾಹಿತಿ ಇಲ್ಲ. ಹಿಂದಿನ ಕಮಿಟಿಯ ಅಧ್ಯಕ್ಷರು ಅಬ್ದುಲ್ ಅಜೀಜ ಹಸನಸಾಬ್ ದೊಡ್ಮನಿ ಹಾಗೂ ಉಪಾಧ್ಯಕ್ಷರು ಇಬ್ರಾಹಿಂ ಮುಲ್ಲಾ ಇದ್ದರು. ಸಾಕ್ಷಿ ಮುಂದುವರೆದು ಆಗಿನ ಉಪಾಧ್ಯಕ್ಷರು ಮೃತಪಟ್ಟಿರುತ್ತಾರೆಂದು ತಿಳಿಸುತ್ತಾರೆ. ಅದರಂತೆ ಆಗಿನ ಸ್ಕ್ರೇಟರಿ ಮಂಜರ್ ಹುಸೇನ್ ಸಯ್ಯದ್, ಖಜಾಂಚಿಯಾಗಿ ರಫೀಕ್ ಇಸ್ಮಾಯಿಲ್

ಶೇಖರವರು ಇದ್ದರು. ಸದರಿ ಕಮಿಟಿಯಲ್ಲಿ ನಾನು ಯಾವುದೇ ಪದಾಧಿಕಾರಿಯಾಗಿರಲಿಲ್ಲ.

ಮಂಜರ್ ಹುಸೇನ್ ಸಯ್ಯದ್ ಆಗಿನ ಕಾರ್ಯದರ್ಶಿಯು ಸಿವಿಲ್ ಇಂಜಿನಿಯರ್ ಇರುತ್ತಾರೆ. ಸದರಿ ಮಂಜರ್ ರವರು ಸಿವಿಲ್ ಇಂಜಿನಿಯರ್ ವೃತ್ತಿಯನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಮಂಜರ್ ರವರು ತಮ್ಮ ಹೆಸರಿನಲ್ಲಿ ಹಾಗೂ ತಮ್ಮ ಹೆಂಡತಿ–ಮಕ್ಕಳ ಹೆಸರಿನಲ್ಲಿ ಅಂಕೋಲಾ, ಕುಮಟಾ ಹಾಗೂ ಮಂಗಳೂರಿನಲ್ಲಿ ಕೋಟ್ಯಾಂತರ ರೂಪಾಯಿ ಆಸ್ತಿ ಮಾಡಿಕೊಂಡಿರುತ್ತಾರೆಂದರೆ ಮಾಹಿತಿ ಇಲ್ಲ. ಅಂಜುಮನ್ ಸಂಸ್ಥೆಯ ಪದಾಧಿಕಾರಿಯಾಗಿ ಸಾಕಷ್ಟು ಹಣ ಗಳಿಸಿದ್ದಾರೆಂದರೆ ಮಾಹಿತಿ ಇಲ್ಲ. ಮಂಜರ್ ಹುಸೇನ್ ಸಯ್ಯದ್ ರವರು ನನ್ನ ವಿರುದ್ಧ ರೂ.1,00,000/– ಚೆಕ್ ಅಮಾನ್ಯಕರಣದ ಪ್ರಕರಣ ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿ ಅದು 2010 ರ ಪ್ರಕರಣವಿದ್ದು, 2012 ರಲ್ಲಿ ಮುಕ್ತಾಯಗೊಂಡಿದೆ ಎಂದು ಹೇಳುತ್ತಾರೆ. ಸದರಿಯವರು ಒಂದು ರೂಪಾಯಿ ಪಡೆಯದೇ ಚೆಕ್ ಪ್ರಕರಣ ಮುಕ್ತಾಯಗೊಳಿಸಿದ್ದಾರೆಂದರೆ ಸರಿಯಲ್ಲ.

2002 ರಲ್ಲಿ ಶಾದಿಮಹಲ್ ಕಟ್ಟಿಸಲು ಪ್ರಾರಂಭವಾಗಿದ್ದು, 2012 ರಲ್ಲಿ ಮುಕ್ತಾಯವಾಗಿದೆ. ಶಾದಿಮಹಲ್ ಕಟ್ಟಡದ ಕೆಲಸ ಕಳಪೆ ಕಾಮಗಾರಿಯಲ್ಲಿದೆ ನಾನು ಸಾಕಷ್ಟು ಜನರಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ಶಾದಿಮಹಲ್ ಕಟ್ಟಡವನ್ನು ಯಾರಿಗೆ

ಗುತ್ತಿಗೆ ನೀಡಲಾಗಿತ್ತು ಎಂದು ಮಾಹಿತಿ ಇಲ್ಲ. ಶಾದಿಮಹಲ್ ಕಟ್ಟಡದ ವಿಚಾರವಾಗಿ ವಕ್ಫ ಮಂಡಳಿಗೆ ಮತ್ತು ವಿವಿಧ ಇಲಾಖೆಗೆ ಮತ್ತು ಶಾಸಕರಿಗೆ ಅರ್ಜಿ ನೀಡಿದ್ದರಲ್ಲಿ ನಾನು ಒಬ್ಬ ಎಂದರೆ ಸರಿಯಲ್ಲ. ಸದರಿ ಮಂಜರ್ ರವರು ನನ್ನ ಮೇಲೆ ಮಾಡಿದ ಚೆಕ್ ಅಮಾನ್ಯಕರಣದ ಪ್ರಕರಣದಲ್ಲಿ ಹಣ ಪಡೆಯದೇ ಬಿಡುಗಡೆ ಮಾಡಿಸಿದ್ದಾರೆಂದರೆ ಸರಿಯಲ್ಲ. ಸದರಿ ಮಂಜರ್ ಮಾಡಿದ ಉಪಕಾರಕ್ಕಾಗಿ ಅವರ ಪರವಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ.

ದಿಃ 15-07-2018 ರಂದು ಅಂಜುಮನ್ ಸಂಸ್ಥೆಗೆ ಡಿಸಿ ರವರ ನೇತೃತ್ವದಲ್ಲಿ ಚುನಾವಣೆ ಜರುಗಿದೆ. ಚುನಾವಣಾಧಿಕಾರಿಯಾಗಿ ಧಾರವಾಡದ ಕೆ.ಎಂ.ಶೇಖ ಎಂಬುವವರು ಬಂದಿದ್ದರು. ಸದರಿ ಚುನಾವಣೆ ಸಮಯದಲ್ಲಿ ನನಗೆ ಯಾವುದೇ ಜವಾಬ್ದಾರಿಯನ್ನು ನೀಡಿರಲಿಲ್ಲ. ಆ ಸಮಯದಲ್ಲಿ ಪಾರದರ್ಶಕವಾಗಿ ಚುನಾವಣೆ ಜರುಗಿತು. 2018 ರ ನಂತರ ಇಲೆಕ್ಷನ್ ಪಿಟಿಷನ್ ಆಗಿದ್ದರಿಂದ ದಿಃ 16-12-2020 ರಂದು ಚುನಾಯಿತ ಸದಸ್ಯರ ಕಮಿಟಿ ರಾಜ್ಯ ವಕ್ಫ ಬೋರ್ಡನಿಂದ ಮೂರು ವರ್ಷದ ಅವಧಿಗೆ ಅನುಮೋದನೆಗೊಂಡು ಬಂದಿರುತ್ತದೆ. ಮೂರು ವರ್ಷ ಈಗಾಗಲೇ ಮುಗಿದಿದ್ದು, ಆದರೆ ಅವಧಿ ವಿಸ್ತರಣೆ ಕುರಿತಾಗಿ ಪುನಃ ರಾಜ್ಯ ವಕ್ಫ ನವರು ಆದೇಶ ನೀಡಿರುತ್ತಾರೆ.

ಚುನಾವಣೆಯಲ್ಲಿ ಪರಾಭವಗೊಂಡ ಅಭ್ಯರ್ಥಿಗಳು ತಕರಾರು ತೆಗೆದು ಚುನಾವಣಾ ಪ್ರಕ್ರಿಯೆ ಪ್ರಶ್ನಿಸಿದ್ದರು. ಅಂಜುಮನ್ ಸಂಸ್ಥೆಯ ಸದಸ್ಯರ ಪೈಕಿ ಸಾಕಷ್ಟು ಜನ ವಿದೇಶದಲ್ಲಿದ್ದರೂ ಸಹ ಅವರ ಪರವಾಗಿ ಮತ ಚಲಾಯಿಸಿರುತ್ತಾರೆಂದು ಚುನಾವಣಾ ಪ್ರಕ್ರಿಯೆ ಪ್ರಶ್ನಿಸಲಾಗಿತ್ತು ಎಂದರೆ ಸರಿಯಲ್ಲ. ಆಡಳಿತಾಧಿಕಾರಿ ಅವಧಿಯಲ್ಲಿ ಪ್ರತಿ ವಾರ ಲೆಕ್ಕಪತ್ರ ಮಾಡಿ ಆಯಾ ತಿಂಗಳಲ್ಲಿ ಸಾರ್ವಜನಿಕವಾಗಿ ಅವುಗಳನ್ನು ತಿಳಿಯಪಡಿಸುತ್ತಿದ್ದರು ಎಂದರೆ ಅವರ ಅವಧಿಯಲ್ಲಿ ಯಾವ ರೀತಿ ಮಾಡಿರುತ್ತಾರೆಂದು ನನ್ನ ಗಮನಕ್ಕೆ ಇಲ್ಲ ಎಂದು ಹೇಳುತ್ತಾರೆ. 2020 ರಿಂದ ಇದುವರೆಗೂ ಎಷ್ಟು ಸಾರಿ ಅಂಜುಮನ್ ಸಂಸ್ಥೆ ಸಾಮಾನ್ಯ ಸಭೆ ಆಗಿದೆ ಎನ್ನುವ ಬಗ್ಗೆ ಮಾಹಿತಿ ಇಲ್ಲ. ಮಂಜರ್ ಹುಸೇನ ಸಯ್ಯದ್ ರವರೇ ಈಗಲೂ ಸಹ ಅಂಜುಮನ್ ಸಂಸ್ಥೆಯ ಅಧ್ಯಕ್ಷರಿದ್ದಾರೆಂದರೆ ಸರಿ. ಸದರಿ ಮಂಜರ್ ರವರ ಪರವಾಗಿ ನಾನೇ ಎಲ್ಲ ರೀತಿಯ ಕೆಲಸ ಮಾಡುತ್ತೇನೆಂದರೆ ಸರಿಯಲ್ಲ.

ನಿಪಿ-4 ರಲ್ಲಿ ಯಾವುದೇ ಪತ್ರಕರ್ತರು ಕಂಡು ಬರುವುದಿಲ್ಲ. ನಿಪಿ-4 ರ ಭಾವಚಿತ್ರವನ್ನು ಯಾರು ಮಾಡಿರುತ್ತಾರೆಂದರೆ ಸಾಕ್ಷಿ, ಆ ದಿನ ನಾವೆಲ್ಲ ಠಾಣೆಯ ಮುಂದೆ ಹಾಜರಾದಾಗ ಪತ್ರಕರ್ತರಲ್ಲಿ ಯಾರಾದರೂ ಒಬ್ಬರು ತೆಗೆದಿರಬಹುದು ಎಂದು ಹೇಳುತ್ತಾರೆ. ನಿಪಿ-4 ರಲ್ಲಿ ನಮೂದಿಸಿದ ಆಡಳಿತಾಧಿಕಾರಿಗಳ ಹೆಸರು ಮತ್ತು ಅವರ ಪದವಿ ಕುರಿತು ಪತ್ರಕರ್ತರಿಗೆ ವೈಯಕ್ತಿಕ ತಿಳುವಳಿಕೆ ಇರುವುದಿಲ್ಲ ಎಂದರೆ ಆ ಕುರಿತು ಅರ್ಜಿಯಲ್ಲಿ ನಮೂದಿಸಿತ್ತು ಎಂದು ಹೇಳುತ್ತಾರೆ. ಸದರಿ ಆಡಳಿತಾಧಿಕಾರಿ ಹಾಗೂ ಸಲಹಾ ಸಮಿತಿ ಮತ್ತು ಜಿಲ್ಲಾ ವಕ್ಫ ಬೋರ್ಡ ಅಧ್ಯಕ್ಷರ ಕುರಿತು ವಿವರಿಸಿದವರಲ್ಲಿ ಯಾರು

ಅಹತಿ ಹದೀಸ್ ಭಯೋತ್ಪಾದನಾ ಸಂಘಟನೆಯಲ್ಲಿ ಸೇರಿದವರು ಎಂಬ ಪ್ರಶ್ನೆಗೆ ಆ ರೀತಿ ನಾವು ಅಲ್ಲಿ ಹೇಳಿಲ್ಲ ಎಂದು ಹೇಳುತ್ತಾರೆ. ಸದರಿ ಪತ್ರಿಕಾ ಪ್ರಕಟಣೆಯಲ್ಲಿ ಅಹತಿ ಹದೀಸ್ ಎಂದು ಪ್ರಕಟಣೆ ನೀಡಿಲ್ಲ ಎಂದು ನಂತರದ ದಿನದಲ್ಲಿ ಸ್ಪಷ್ಟನೆ ನೀಡಿಲ್ಲ ಎಂದರೆ ಸಾಕ್ಷಿ ಆ ಕುರಿತು ನಾನೇ ಹೇಳೇ ಇಲ್ಲ ಕಾರಣ ಮರು ಪ್ರಕಟಣೆ ಕೊಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಸದರಿ ವಿಷಯವಾಗಿ ನನಗೆ ನೋಟಿಸು ನೀಡಿದಾಗ ಆವಾಗಲೂ ಸಹ ನಾನು ಉತ್ತರದ ಮೂಲಕ ತಿಳಿಸಬಹುದಿತ್ತು ಎಂದರೆ ಆ ಕುರಿತು ಆವಾಗಲೇ ವಕೀಲರ ಮೂಲಕ ಉತ್ತರ ಕಳುಹಿಸಲಾಗಿದೆ ಎಂದು ಹೇಳುತ್ತಾರೆ.

ಪತ್ರಿಕಾ ಪ್ರಕಟಣೆ ಕುರಿತಾಗಿ ಕರಾವಳಿ ಮುಂಜಾವು ಪತ್ರಿಕೆಯ ಆಗಿನ ಸ್ಥಳೀಯ ವರದಿಗಾರನಾದ ವಾಸುದೇವ ಗುನಗಾರವರಿಗೆ ವಿಚಾರಿಸಲು ಆ ದಿನ ತಾನು ಪೊಲೀಸ್ ಠಾಣೆಗೆ ಹೋಗಿರಲಿಲ್ಲ, ಅಹತಿ ಹದೀಸ್ ಭಯೋತ್ಪಾದನೆ ಸಂಘಟನೆ ಕುರಿತಾಗಿ ವರದಿ ಪ್ರಕಟಿಸಲು ಅವರಿಗೆ ನಾನೇ ಮಾಹಿತಿ ನೀಡಿದ ಬಗ್ಗೆ ವಾದಿಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ನನ್ನ ಮಾಹಿತಿ ಮೇರೆಗೆ ನಿಪಿ–4 ರಲ್ಲಿ ಅಹತಿ ಹದೀಸ್ ಭಯೋತ್ಪಾದನೆ ಸಂಘಟನೆ ಕುರಿತಾಗಿ ಪ್ರಕಟಣೆಗೊಂಡಿದೆ ಎಂದರೆ ಸರಿಯಲ್ಲ. ನಿಪಿ–4 ರಲ್ಲಿಯ ಭಾವಚಿತ್ರವನ್ನೂ ಸಹ ನಾನೇ ಅವರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–4 ರಲ್ಲಿರುವ ಆಡಳಿತಾಧಿಕಾರಿ ಮತ್ತು ಉಳಿದ ಸದಸ್ಯರು ಹಾಗೂ ಆಗಿನ ಅಂಜುಮನ್ ಸಂಸ್ಥೆಯ 14 ಜನ ಸಲಹಾ ಮಂಡಳಿ ಸದಸ್ಯರು ಅಹತಿ ಹದೀಸ್ ಭಯೋತ್ಪಾದನಾ ಸಂಘಟನೆಯಲ್ಲಿ ತೊಡಗಿದವರಲ್ಲ ಎಂದರೆ ಸಾಕ್ಷಿ ಆ ಕುರಿತು ನಾನು ಹೇಳಿಲ್ಲ ಎಂದು ಹೇಳುತ್ತಾರೆ.

ನಿಪಿ–4 ರಲ್ಲಿಯ ಮಾಹಿತಿಯನ್ನು ಪತ್ರಿಕೆಯವರು ಸ್ವಂತ ಮಾಹಿತಿಯಿಂದ ಹಾಕಿಲ್ಲ, ಮುಸ್ಲಿಂ ವ್ಯಕ್ತಿಯಿಂದ ಬಂದ ಮಾಹಿತಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ವರದಿ ಬಂದ ಆಧಾರದ ಮೇಲೆ ಮಾತ್ರ ಪತ್ರಿಕಾ ಪ್ರಕಟಣೆ ಮಾಡಲಾಗಿದೆ ಎಂದು 1 ಮತ್ತು 2 ನೇ ಪ್ರತಿವಾದಿಯರು ತಮ್ಮ ನೋಟಿಸಿನಲ್ಲಿ ತಿಳಿಸಿರುತ್ತಾರೆಂದರೆ ಇರಬಹುದು.

ನನ್ನ ಹೆಸರಿನಿಂದ ಮೇಲಿಂದ ಮೇಲೆ ವರದಿಗಳು ಆಗುತ್ತಿರುವುದರಿಂದ, ನಿಪಿ–4 ರಲ್ಲಿ ನನ್ನ ಹೆಸರಿರುವುದರಿಂದ 1 ಮತ್ತು 2 ನೇ ಪ್ರತಿವಾದಿಯರು ವಿಚಾರಿಸದೇ ಪತ್ರಿಕಾ ಪ್ರಕಟಣೆ ಹೊರಡಿಸಿರುತ್ತಾರೆಂದರೆ ಸರಿಯಲ್ಲ. ನಿಪಿ–4 ಪತ್ರಿಕಾ ಪ್ರಕಟಣೆ ಆದ ನಂತರ ಆಗಿನ ಅಂಜುಮನ್ ಸಂಸ್ಥೆಯ ಆಡಳಿತಾಧಿಕಾರಿಗಳು ಮತ್ತು ಸಲಹಾ ಮಂಡಳಿ ಸದಸ್ಯರು ಬಹಳಷ್ಟು ಅವಮಾನ ಅನುಭವಿಸಬೇಕಾಯಿತು ಎಂದರೆ ಮಾಹಿತಿ ಇಲ್ಲ. ನನ್ನ ಹಿಂಬಾಲಕರೇ ವಾದಿ ಹಾಗೂ ಅವರ ಇತರ ಸದಸ್ಯರನ್ನು ಭಯೋತ್ಪಾದಕರು ಎಂದು ಮಾತನಾಡಿದ್ದಾರೆಂದರೆ ಸಾಕ್ಷಿ, ನನಗೆ ಯಾವುದೇ ಹಿಂಬಾಲಕರು ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಪತ್ರಿಕಾ ಪ್ರಕಟಣೆಯಿಂದ ವಾದಿ ಹಾಗೂ ಇತರರಿಗೆ ಅವರ ವೈಯಕ್ತಿಕ ಜೀವನ ಮತ್ತು ವ್ಯವಹಾರಕ್ಕೆ ತೊಂದರೆ ಆಗಿದೆ ಎಂದರೆ ಮಾಹಿತಿ ಇಲ್ಲ. ವಾದಿ ಆಗಲೀ ಅಥವಾ ಉಳಿದ ಸದಸ್ಯರಾಗಲೀ ಯಾವುದೇ ಭಯೋತ್ಪಾದಕ ಚಟುವಟಿಕೆಯಲ್ಲಿ ತೊಡಗಿಲ್ಲ ಎಂದರೆ ಆ ಕುರಿತು ನಾನು ಯಾವುದೇ ವಿಷಯ ಪ್ರಸ್ತಾಪ ಮಾಡಿಲ್ಲ ಎಂದು ಹೇಳುತ್ತಾರೆ.

ಸದರಿ ಪ್ರಸ್ತುತ ಪ್ರಕಟಣೆ ನಂತರ ಸುಳ್ಳು ಸುದ್ದಿ ಕುರಿತಾಗಿ ತದನಂತರ ಯಾವುದೇ ಪ್ರಕಟಣೆ ನೀಡದೇ ವಾದಿ ಹಾಗೂ ಅವರಂತೆ ನೇಮಕವಾದ ಸದಸ್ಯರಿಗೂ ತೊಂದರೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಈ ಕುರಿತಾಗಿ ನನಗೆ ನೋಟಿಸು ನೀಡಿದ್ದರು ಎಂದರೆ ಸಾಕ್ಷಿ ಎಲ್ಲರಿಗೂ ಉತ್ತರ ನೀಡಿದ್ದೇನೆ, ಇಬ್ಬರು ಮಾತ್ರ ಪ್ರಕರಣ ದಾಖಲಿಸಿದ್ದಾರೆಂದು ಹೇಳುತ್ತಾರೆ. ನಿಪಿ-4 ಪತ್ರಿಕೆ ದೊರೆಯದೇ ಇರುವುದರಿಂದ ಮತ್ತು ಅನಾರೋಗ್ಯ ಮತ್ತು ಇತರ ಕಾರಣಕ್ಕಾಗಿ ಉಳಿದ ನೇಮಕವಾದ ಸದಸ್ಯರು ಪ್ರಕರಣ ದಾಖಲಿಸಿಲ್ಲ ಎಂದರೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ನೋಟಿಸಿಗೆ ಉತ್ತರ ಪಡೆದ ನಂತರ ಉಳಿದವರು ಮುಂದುವರೆದಿಲ್ಲ ಆದರೆ ವಾದಿ ಸೇರಿ ಮೂರು ಜನ ಪ್ರಕರಣ ದಾಖಲಿಸಿದ್ದು, ಅವರಲ್ಲಿ ಒಬ್ಬರು ಹಿಂಪಡೆದಿದ್ದು, ವಾದಿ ಹಾಗೂ ಇನ್ನೊಬ್ಬರು ಮಾತ್ರ ಪ್ರಕರಣ ಮುಂದುವರೆಸಿದ್ದಾರೆಂದು ಹೇಳುತ್ತಾರೆ. ನಿಪಿ-4 ರಲ್ಲಿ ಬರೆದ ಮಾಹಿತಿಗೆ ನಾನು ಹಾಗೂ ಉಳಿದ ಪ್ರತಿವಾದಿಯರು ಜವಾಬ್ದಾರರು ಎಂದರೆ ಸರಿಯಲ್ಲ.

ವಾದಿಯು ಚುನಾವಣೆ ನಿಮಿತ್ತವಾಗಿ ನನ್ನ ಮೇಲೆ ಸಲ್ಲಿಸಿದ ಪ್ರತ್ಯೇಕ ಪ್ರಕರಣದಲ್ಲಿ ಪೊಲೀಸರು ಬಿ ಅಂತಿಮ ವರದಿ ಸಲ್ಲಿಸಿರುತ್ತಾರೆ. ನನ್ನ ಪ್ರಭಾವದಿಂದ ಬಿ ಅಂತಿಮ ವರದಿ ಸಲ್ಲಿಸಲಾಗಿದೆಯೆಂದರೆ ಸರಿಯಲ್ಲ. ಸದರಿ ಪ್ರಕರಣ 2019 ರ ಲೋಕಸಭಾ ಚುನಾವಣೆ ಸಮಯದಲ್ಲಿ ಆಗಿತ್ತು. ನಾನು ಕಾಂಗ್ರೇಸ್ ಪಕ್ಷದ ಕಾರ್ಯಕರ್ತನಿದ್ದೇನೆ. ಕಾಂಗ್ರೇಸ್ ಪಕ್ಷದ ಅಭ್ಯರ್ಥಿಗೆ ಮತ ಚಲಾಯಿಸುವಂತೆ ಧಾರ್ಮಿಕ ಸಭೆಯಲ್ಲಿ ಹೇಳಿದ್ದರಿಂದ ನನ್ನ ಮೇಲೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆ

ಸಮಯದಲ್ಲಿ ಜಿಲ್ಲಾ ವಕ್ಫ ಕಮಿಟಿಯ ಉಪಾಧ್ಯಕ್ಷನಿರುವುದರಿಂದ ಜಿಲ್ಲೆಯ ಎಲ್ಲ ಮಸೀದಿಗಳಲ್ಲಿ ಮತದಾನ ಕಡ್ಡಾಯ ಮಾಡಿ ಎಂಬ ತಿಳುವಳಿಕೆ ಮೂಡಿಸುವಲ್ಲಿ ಜಾಗೃತಿಗಾಗಿ ಮಾತನಾಡಿದಾಗ ಪ್ರಕರಣದ ವಾದಿ ಹಾಗೂ ಆತನ ಮಕ್ಕಳು ವಿನಾಕಾರಣ ಪ್ರಕರಣ ದಾಖಲಿಸಿದ್ದರು ಎಂದು ಹೇಳುತ್ತಾರೆ.

ನಿಪಿ-4 ಪ್ರಕಟಗೊಂಡ ಅವಧಿಯಲ್ಲಿ ವಾದಿ ಹಾಗೂ ಉಳಿದ ಸದಸ್ಯರು ಅಂಜುಮನ್ ಸಂಸ್ಥೆಯ ಸಲಹಾ ಸಮಿತಿ ಸದಸ್ಯರಾಗಿ ಕೆಲಸ ಮಾಡುತ್ತಿರುವುದು ಸಹಿಸದೇ ಅವರಿಗೆ ಅಪಮಾನ ಮಾಡಲು ನಿಪಿ-4 ರಲ್ಲಿ ತಿಳಿಸಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಮಂಜರ್ ಸಯ್ಯದ್ ಹಾಗೂ ಅವರ ಗುಂಪಿನ ಸದಸ್ಯರ ಮಾತು ಕೇಳಿ ದಾವೆಯಲ್ಲಿ ತಿಳಿಸಿದಂತೆ ವಾದಿ ಗುಂಪಿಗೆ ತೊಂದರೆ ನೀಡಿರುತ್ತೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.